# ಅನಂತಮೂರ್ತಿ ಅವರ ವರ್ಣನೆಗೆ ಬೆರಗಾದೆ!

ನಾನು ಬರೆದ ಮಕ್ಕಳ ಕವನ ಸಂಕಲನ 'ಪಂಚರಂಗಿ'ಯನ್ನು ಖ್ಯಾತ ಸಾಹಿತಿಗಳಾಗಿದ್ದ ಯು.ಆರ್. ಅನಂತಮೂರ್ತಿ ಅವರು ಬಣ್ಣಿಸಿದ ರೀತಿ, ನನ್ನನ್ನು ಮೂಕವಿಸ್ಮಿತಳನ್ನಾಗಿಸಿದೆ. ಹಲವು ಕಡೆಗಳಲ್ಲಿ ನಡೆದ ಮಕ್ಕಳ ಸಾಹಿತ್ಯ ಸಮ್ಮೇಳನಗಳಲ್ಲಿ ಅಧ್ಯಕ್ಷತೆ ವಹಿಸಿ ಹಿರಿಯ ಸಾಹಿತಿಗಳ ಜೊತೆ ಒಡನಾಡಿದ್ದು ಮರೆಯಲಾಗದ ಸವಿನೆನಪಾಗಿ ಉಳಿದಿದೆ.

**■ ಮನೀಷಾ ಪಾಟೀಲ,**
**ವಿಜಯಪುರ**



ಕನ್ನಡ ಪುಸ್ತಕ ಪ್ರಾಧಿಕಾರ ಉದಯೋನ್ಮುಖಯುವ ಲೇಖಕರ ಹಸ್ತಪ್ರತಿಗೆ ಕೊಡಮಾಡುವ ಪ್ರೋತ್ಸಾಹ ಧನ ಯೋಜನೆ (2005) ಅಡಿ ನನ್ನ ಹಸ್ತಪ್ರತಿ ಆಯ್ಕೆಯಾಗಿತ್ತು. ನಂತರ ತುಮಕೂರಿನ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಯು.ಆರ್. ಅನಂತಮೂರ್ತಿ ನಾನು ಬರೆದ ಮಕ್ಕಳ ಕವನ ಸಂಕಲನ 'ಪಂಚರಂಗಿ'ಬಿಡುಗಡೆ ಮಾಡಿ ಮಾತನಾಡುತ್ತಾ 'ಈ ಮನೀಷಾಗೆ ಈಗ ಕೇವಲ ಹತ್ತು ವರ್ಷ ಮಾತ್ರ. ಮೂಡಣದಲ್ಲಿ ನೇಸರ ಹೊಂಗಿರಣ ಚೆಲ್ಲಿದಾಗ ಮಾಮರದಲ್ಲಿ ಕೋಗಿಲೆ ಸರಿಗಮಪ ಹಾಡಿ, ಭೂರಮೆ ಹುಲ್ಲಾವಲಿನ ಮೇಲೆ ಮಯೂರ ನಾಟ್ಯ ಮಾಡಿ ಗಗನದಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟುತ್ತ ರೆಕ್ಕೆ ಬಿಚ್ಚಿ ಹಾರಿದಂತೆ ಅವಳ ಕವನಗಳು ಸರಿಗಮಪ ಮಾಡಿ ನಾದಸ್ವರ ಚೆಲ್ಲಿವೆ' ಎಂದು ಬಣ್ಣಿಸಿದಾಗ ನಾನು ಮೂಕವಿಸ್ಮಿತಳಾದೆ.

ಗ್ರಂಥ ಬಿಡುಗಡೆ ಮಾಡಿದ ಅನಂತಮೂರ್ತಿಯವರು ಅಜ್ಜ ಮೊಮ್ಮಗಳಿಗೆ ತಬ್ಬಿ ಒಲವಿನ ಧಾರೆ ಎರೆಯುವಂತೆ ನನ್ನನ್ನು ಬರಸೆಳೆದು ಹರಸಿ ಆಶೀರ್ವದಿಸಿದ್ದು ಹುಣ್ಣಿಮೆಯ ಬೆಳದಿಂಗಳ ಅನುಭವ ನೀಡಿತು. ಅವರೊಟ್ಟಿಗೆ ಆಗಿನ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಕೆ.ವೈ. ನಾರಾಯಣಸ್ವಾಮಿಯವರು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದು ನನ್ನ ಸ್ಮೃತಿಪಟಲದಲ್ಲಿ ಅಜರಾಮರವಾಗಿದೆ. ಇವೆಲ್ಲವುಗಳಿಗೆ ಕಿರೀಟಪ್ರಾಯವಿಟ್ಟಂತೆ ಕನ್ನಡ ಸಾಹಿತ್ಯ ಪರಿಷತ್ತು ನನ್ನ ಕೃತಿಗೆ ದತ್ತಿ ಪ್ರಶಸ್ತಿ ನೀಡಿ ಗೌರವಿಸಿತು. ವಿಜ್ಞಾನ ಮತ್ತು ತಂತ್ರಜ್ಞಾನದ ಆಗಿನ ಮಂತ್ರಿಗಳಾದ ರಾಮಚಂದ್ರೇಗೌಡ ಪ್ರಶಸ್ತಿ ಪ್ರದಾನ ಮಾಡಿದರು. ನನ್ನ ಭಾವನೆಗಳಿಗೆ ಬಣ್ಣ ಬಳಿದ, ಅಂತರಂಗದ ತಂತಿ ಮೀಟಿದ ಖ್ಯಾತ ಸಾಹಿತಿಗಳಾದ ಕೆ.ಎಸ್. ನಿಸಾರ್ ಅಹ್ಮದ್ ಅವರು ನನಗೆ ಪ್ರಶಸ್ತಿ ಪ್ರದಾನ ಮಾಡಿದಾಗ ಜೋರಾಗಿ ಹಾಕಿದ ಕರತಾಡನ ನನ್ನ ಅಂತರಂಗದ ತಂತಿ ಮೀಟಿತು. ಅವರೊಟ್ಟಿಗೆ ಚಂದ್ರಶೇಖರ ಪಾಟೀಲ ಇದ್ದರು. ಇನ್‌ಫೋಸಿಸ್‌ನ ಸುಧಾಮೂರ್ತಿ ಅವರಿಗೂ ದತ್ತಿ ಪ್ರಶಸ್ತಿ ಇದೇ ಸಂದರ್ಭದಲ್ಲಿ ದೊರೆತಿತ್ತು. ಅವರು ನನ್ನ ಬೆನ್ನುತಟ್ಟಿ 'ನೀನು ಮುಂದೊಂದು ದಿನ ಸಾಹಿತಿಗಳ ಸಾಲಿನ ಅದ್ಭುತ ಪ್ರತಿಭೆಯಾಗಿ ಹೊರಹೊಮ್ಮುತ್ತಿ' ಎಂದು ಹಾಡಿ ಹರಸಿದ್ದು ಮರೆಯಲಾಗದ ಮಾಣಿಕ್ಯದ ಮುತ್ತು.

ಅವರಾಡಿದ ಮಾತಿನಂತೆ ಕಲ್ಬುರ್ಗಿ ಜಿಲ್ಲಾ ಮಕ್ಕಳ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಸುರಪುರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಉದ್ಘಾಟಿಸಿ, ಬೆಳಗಾವಿಯಲ್ಲಿ ಜರುಗಿದ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ, ವಿಜಯಪುರ ಜಿಲ್ಲೆ, ಮುದ್ದೇಬಿಹಾಳದಲ್ಲಿ ಜರುಗಿದ ಮಕ್ಕಳ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಅಲ್ಲದೆ ಹಲವಾರು ಪ್ರಶಸ್ತಿ, ಪುರಸ್ಕಾರ ನೀಡಿ ನನ್ನನ್ನು ಚೆನ್ನದ ಲೇಪನ ಅಂಬಾರಿಯಲ್ಲಿ ಕೂರಿಸಿ ಜೋಗುಳ ಹಾಡಿದ್ದು ನನ್ನ ಆತ್ಮದಲ್ಲಿ ಚಿರಸ್ಥಾಯಿಯಾಗಿದೆ.

ಗಂಗಮ್ಮ ಸೋಮಪ್ಪ ಬೊಮ್ಮಾಯಿ ಪ್ರತಿಷ್ಠಾನ 2006ರಲ್ಲಿ ಹುಬ್ಬಳ್ಳಿಯ ಸವಾಯಿ ಗಂಧರ್ವಹಾಲ್‌ನಲ್ಲಿ ನನ್ನ 'ಪಂಚರಂಗಿ' ಕವನ ಸಂಕಲನಕ್ಕೆ 'ಅರಳುಮೊಗ್ಗು' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಪತ್ರಕರ್ತ ರಂಜಾನ ದರ್ಗಾ 'ಈ ದೇಶದ ಸಂಸ್ಕೃತಿ ಪಂಚಮುಖಿ, ಇಡೀ ದೇಶವೆ ಒಂದು ಸಂಸಾರದ ಗೂಡಾಗಿದೆ. ಸೃಜನಶೀಲ ಸಕಾರಾತ್ಮಕ ಮನಸ್ಸನ್ನು ಮನೀಷಾ ಹೊಂದಿದ್ದಾಳೆ. ಈಕೆಯ ಕವನ ಜಿ.ಎಸ್. ಶಿವರುದ್ರಪ್ಪ ಅವರ 'ಏಳು ಸುತ್ತಿನ ಮಲ್ಲಿಗೆ' ಕವನವನ್ನು ನೆನಪಿಸುತ್ತದೆ' ಎಂದು ಹೇಳಿದ್ದು ನನ್ನ ಕರ್ಣ ನಂಬದಾಯಿತು. ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಮಣಿಪಾಲ ಹೆಸರಾಂತ ಸಾಹಿತಿಗಳಾದ ವೈದೇಹಿ, ಆಗಿನ ಕಂದಾಯ ಸಚಿವರಾಗಿದ್ದ ಜಗದೀಶ ಶೆಟ್ಟರ, ಆಗಿನ ವಿಧಾನ ಪರಿಷತ್ ಸದಸ್ಯರು ಹಾಗೂ ಗಂಗಮ್ಮ ತಾಯಿಯವರ ಮಗನಾದ ಬಸವರಾಜ ಬೊಮ್ಮಾಯಿ, ಐ.ಜಿ. ಸನದಿ, ಪ್ರಲ್ಹಾದ ಜೋಶಿ, ಮಹೇಶ ಬೊಮ್ಮಾಯಿ, ಚಂದ್ರಶೇಖರ ವಸ್ತ್ರದ ಗಣ್ಯಾತಿಗಣ್ಯರ ಸಮ್ಮುಖದಲ್ಲಿ ಜೊತೆಗೆ ಕಿಕ್ಕಿರಿದು ತುಂಬಿದ ಅಭಿಮಾನಿಗಳ ಕರತಾಡನ ಮಧ್ಯ ನಾನು ಈ ಪ್ರಶಸ್ತಿ ಸ್ವೀಕರಿಸಿದ್ದು ನಾನೆಂದಿಗೂ ಮರೆಯಲಾರೆ.

ಈ ಎಲ್ಲ ಸವಿನೆನಪುಗಳನ್ನು ಹೊತ್ತ ನಾನು ಅವುಗಳನ್ನು ಮೆಲುಕು ಹಾಕುತ್ತಾ ನನ್ನ ಸಾಹಿತ್ಯಕೃಷಿಯಲ್ಲಿ ತೊಡಗಿಸಿಕೊಂಡಿರುವೆ. ■